"ಸಾಹಸದ ಆಧಾರದ ಮೇಲೆ ಸ್ವಯಂ ಅನ್ನು ಪರಿಶ್ರಮದಿಂದ ಮುಕ್ತ, ಸದಾ ವಿಜಯಿ ಅನುಭವ ಮಾಡಿ"

ಇಂದು ನವಯುಗದ ರಚೈತ ಬಾಪ್ದಾದಾರವರು ತನ್ನ ಅತಿ ಸ್ನೇಹಿ, ಸದಾ ಸಹಯೋಗಿ ಹಾಗೂ ಅತಿ ಸಮೀಪ ಮಕ್ಕಳಿಗೆ ನವಯುಗ, ನವ ಜೀವನ ಹಾಗೂ ನವ ವರ್ಷದ ಶುಭಾಶಯಗಳನ್ನು ಕೊಡಲು ಬಂದಿದ್ದಾರೆ. ನಾಲ್ಕಾರು ಕಡೆಯ ಮಕ್ಕಳು ಅತಿ ಸ್ನೇಹದಿಂದ ಹೃದಯದ ಸಮ್ಮುಖದಲ್ಲಿ ಇಟ್ಟುಕೊಂಡು ಶುಭಾಶಯಗಳನ್ನು ಪಡೆಯುತ್ತಿದ್ದಾರೆ. ಬಾಪ್ದಾದಾರವರು ಮಕ್ಕಳ ನವ ವರ್ಷದ ಉಮಂಗ ಉತ್ಸಾಹವನ್ನು ನೋಡಿ ಖುಷಿಯಾಗುತ್ತಿದ್ದಾರೆ. ಬಹಳಷ್ಟು ಮಕ್ಕಳು ಭಲೇ ದೂರ ಕುಳಿತಿದ್ದಾರೆ, ಅಥವಾ ಸಮೀಪ ಕುಳಿತಿದ್ದಾರೆ, ಎಲ್ಲರ ಮನಸ್ಸಿನಲ್ಲಿ ಇದೆ ಉಮಂಗ ಉತ್ಸಾಹವಿದೆ- ಈ ವರ್ಷದಲ್ಲಿ ನವೀನತೆಯನ್ನು ಮಾಡಿ ತೋರಿಸುತ್ತೇವೆ. ಸ್ವಯಂನ ಪರಿವರ್ತನೆಯಲ್ಲಾಗಿರಲಿ, ಅಥವಾ ಸೇವೆಯ ಸಫಲತೆಯಲ್ಲಾಗಿರಲಿ, ಪ್ರತಿಯೊಂದು ಆತ್ಮನಿಗೂ ಶುಭ ಭಾವನೆ, ಶುಭಕಾಮನೆಯ ಮುಖಾಂತರ ಪರಿವರ್ತನೆ ಮಾಡುವುದರಲ್ಲಿ ಉಮಂಗವು ಚೆನ್ನಾಗಿದೆ, ಉತ್ಸಾಹವು ಬಹಳ ಚೆನ್ನಾಗಿದೆ, ಜೊತೆ-ಜೊತೆ ಸಾಹಸವು ಯಥಾಶಕ್ತಿ ಇದೆ. ಬಾಪ್ದಾದಾರವರು ಇಂತಹ ಸಾಹಸವಂತ ಮಕ್ಕಳ ಒಂದು ಸಂಕಲ್ಪದ ಹಿಂದೆ ಪದಮದಷ್ಟು ಸಹಯೋಗವನ್ನು ಅವಶ್ಯವಾಗಿ ಕೊಡುತ್ತಾರೆ. ಆದ್ದರಿಂದ ಸದಾ ಸಾಹಸದೊಂದಿಗೆ ಮುಂದುವರೆಯುತ್ತಾ ಹೋಗಿ. ಎಂದೂ ಸಹ ಸ್ವಯಂನ ಪ್ರತಿ ಅಥವಾ ಅನ್ಯರ ಪ್ರತಿ ಸಾಹಸವನ್ನು ಕಡಿಮೆ ಮಾಡಿಕೊಳ್ಳಬೇಡಿ ಏಕೆಂದರೆ ಈ ನವಯುಗ ಸಾಹಸ ಇಡುವುದರಿಂದ ಹಾರುವಂತಹ ಯುಗವಾಗಿದೆ, ವರದಾನಿ ಯುಗವಾಗಿದೆ, ಪುರುಷೋತ್ತಮ ಯುಗವಾಗಿದೆ, ಡೈರೆಕ್ಟ್ ವಿಧಾತನ ಮುಖಾಂತರ ಸರ್ವ ಶಕ್ತಿಗಳನ್ನು ಆಸ್ತಿಯಲ್ಲಿ ಸಹಜವಾಗಿ ಪ್ರಾಪ್ತಿ ಮಾಡುವಂತಹ ಯುಗವಾಗಿದೆ, ಆದ್ದರಿಂದ, ಈ ಯುಗದ ಮಹತ್ವವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿ. ಯಾವುದೇ ಕಾರ್ಯವನ್ನು ಪ್ರಾರಂಭ ಮಾಡುತ್ತೀರಿ ಎಂದರೆ ಭಲೆ ಸ್ವಪುರುಷಾರ್ಥವಾಗಿರಲಿ, ವಿಶ್ವ ಸೇವೆಯಾಗಿರಲಿ, ಸದಾ ಸಾಹಸ ಹಾಗೂ ಬಾಪ್ದಾದಾರವರು ಸಹಯೋಗದ ಮೂಲಕ ಸ್ವಪುರುಷಾರ್ಥದಲ್ಲಿ ಹಾಗೂ ಸೇವೆಯಲ್ಲಿ ಸಫಲತೆ ನಿಶ್ಚಿತವಾಗಿ ಆಗಿಯೇ ಹೋಗಿದೆ. ಆಗಲೇ ಬೇಕಾಗಿದೆ. ಅಸಂಭವ, ಸಂಭವವಾಗಲೇ ಬೇಕಾಗಿದೆ ಏಕೆಂದರೆ ಈ ಯುಗ ಸಫಲತೆಯ ಯುಗವಾಗಿದೆ. ಅಸಂಭವ, ಸಂಭವವಾಗುವ ಯುಗವಾಗಿದೆ. ಆದ್ದರಿಂದ ಆಗುತ್ತದೆಯೇ ಇಲ್ಲವೇ, ಹೇಗೆ ಆಗುವುದು, ಇಂತಹ ಪ್ರಶ್ನೆಗಳು ಈ ಯುಗದಲ್ಲಿ ನೀವು ಬ್ರಾಹ್ಮಣ ಆತ್ಮಗಳಿಗೆ ಬರಲೇಬಾರದು. ಬ್ರಾಹ್ಮಣರ ಜನ್ಮ ಪತ್ರದಲ್ಲಿ, ಸಫಲತೆ ಅವರ ಜನ್ಮಸಿದ್ಧ ಅಧಿಕಾರವಾಗಿದೆ. ಅಧಿಕಾರಿ ಆತ್ಮಗಳಿಗೆ ಯೋಚಿಸುವ ಅವಶ್ಯಕತೆಯೇ ಇಲ್ಲ, ಆಸ್ತಿ ಸಿಗಲೇಬೇಕಾಗಿದೆ.

ಹಾಗಾದರೆ ಹೊಸ ವರ್ಷದಲ್ಲಿ ಈ ವಿಶೇಷ ಸ್ಮೃತಿಯನ್ನು ಇಮರ್ಜ್ ಮಾಡಿಕೊಳ್ಳಿ- ಎಲ್ಲಾ ಕಡೆಯಿಂದಲೂ ಸಫಲತೆ, ನಾನು ಶ್ರೇಷ್ಠ ಬ್ರಾಹ್ಮಣ ಆತ್ಮನ ಅಧಿಕಾರವಾಗಿದೆ. ಈ ನಿಶ್ಚಯದಿಂದ, ಆತ್ಮಿಕ ನಶೆಯಲ್ಲಿ ಹಾರುತ್ತ ಹೋಗಿ. (ಅಭಿಮಾನದ ನಶೆಯಲ್ಲ, ಆತ್ಮಿಕ ನಶೆ) ನಿಶ್ಚ ಯ ಬುದ್ಧಿಯವರು ಸದಾ ಪ್ರತಿ ಕಾರ್ಯದಲ್ಲಿ ವಿಜಯಿ ಆಗಿಯೇ ಇರುತ್ತಾರೆ. ಇಂತಹ ನಿಶ್ಚಯ ಬುದ್ಧಿ ಬ್ರಾಹ್ಮಣ ಆತ್ಮಗಳ ಮಸ್ತಕದಲ್ಲಿ ವಿಜಯದ ಭಾಗ್ಯದ ಗೆರೆ ಸದಾ ಇದ್ದೇ ಇರುತ್ತದೆ. ವಿಜಯದ ತಿಲಕ ಸದಾ ಮಸ್ತಕದಲ್ಲಿ ಹೊಳೆಯುತ್ತಾ ಇರುತ್ತದೆ. ಆದ್ದರಿಂದ ಈ ವರ್ಷವನ್ನು ಸದಾ ವಿಜಯಿ ವರ್ಷವನ್ನಾಗಿ ಅನುಭವ ಮಾಡುತ್ತಾ ನಡೆಯಿರಿ. ಇಂತಹ ನಿಶ್ಚಯ ಹಾಗೂ ನಶೆ ಇದೆಯೇ? ಡಬಲ್ ವಿದೇಶಿಯವರಿಗೆ ಇದೆಯೇ? ಡಬಲ್ ವಿದೇಶಿಯವರು ಬುದ್ಧಿವಂತರಾಗಿದ್ದಾರೆ. (ಎಲ್ಲರೂ ಕೈ ಅಲುಗಾಡಿಸಿದರು) ಬಹಳ ಒಳ್ಳೆಯದು. ತಿಲಕ ಕಾಣಿಸುತ್ತಿದೆ. ಹಾಗೂ ಭಾರತ ವಾಸಿಯರಂತೂ ಭಾಗ್ಯವಂತರಾಗಿಯೇ ಇದ್ದಾರೆ, ಏಕೆ? ಭಾರತದ ಧರಣಿಯೇ ಭಾಗ್ಯವಂತವಾಗಿದೆ. ಆದ್ದರಿಂದ ವಿದೇಶಿಯರಾಗಿರಲಿ, ಭಾರತ ವಾಸಿಗಳಾಗಿರಲಿ ಇಬ್ಬರು ಭಾಗ್ಯ ವಿಧಾತನ ಮಕ್ಕಳಾಗಿದ್ದಾರೆ ಆದ್ದರಿಂದ ಪ್ರತಿ ಬ್ರಾಹ್ಮಣ ಮಗು ವಿಜಯಿ ಆಗಿದೆ. ಕೇವಲ ಸಾಹಸವನ್ನು ಇಮರ್ಜ್ ಮಾಡಿಕೊಳ್ಳಿ. ಸಾಹಸ ಸಮಾವೇಶವಾಗಿದೆ ಏಕೆಂದರೆ ಮಾಸ್ಟರ್ ಸರ್ವ ಶಕ್ತಿವಂತ ಆಗಿದ್ದೀರಿ. ಆಗಿದ್ದೀರಲ್ಲವೇ? (ಎಲ್ಲರೂ ಕೈ ಅಲುಗಾಡಿಸಿದರು) ಕೈಯಂತೂ ಬಹಳ ಚೆನ್ನಾಗಿ ಅಲುಗಾಡಿಸುತ್ತೀರಿ. ಈಗ ಮನಸ್ಸನಿಂದಲೂ ಸಹ ಸದಾ ಸಾಹಸದ ಕೈಯನ್ನು ಅಲುಗಾಡಿಸುತ್ತಾ ಇರಿ. ಬಾಪ್ದಾದಾರವರಿಗೆ ಖುಷಿಯಿದೆ ಹೆಮ್ಮೆ ಇದೆ- ನನ್ನ ಒಂದೊಂದು ಮಗು ಅನೇಕ ಬಾರಿಯ ವಿಜಯಿಯಾಗಿದ್ದಾರೆ. ಒಂದು ಸಲ ಅಲ್ಲ, ಅನೇಕ ಬಾರಿಯ ವಿಜಯಿ ಆತ್ಮಗಳಾಗಿದ್ದೀರಿ. ಎಂದ ಮೇಲೆ ಎಂದೂ ಸಹ ಈ ರೀತಿ ಯೋಚಿಸಬೇಡಿ, ಗೊತ್ತಿಲ್ಲ ಏನಾಗುವುದು? ಆಗುವುದು ಈ ಶಬ್ದವನ್ನು ತರಬೇಡಿ. ವಿಜಯಿ ಆಗಿದ್ದೀರಿ ಹಾಗೂ ಸದಾ ಆಗಿರುತ್ತೀರಿ. ಎಲ್ಲರೂ ಪಕ್ಕಾ ಆಗಿದ್ದೀರಾ? ಒಳ್ಳೆಯದು ಈಗ ಅಲ್ಲಿ ಹೋಗಿ ಮತ್ತೆ ಬಲಹೀನ ಸಮಾಚಾರವನ್ನು ಬರೆಯಬಾರದು- ದಾದೀಯರೆ, ಬಾಬಾ, ಮಾಯೆ ಬಂದು ಬಿಟ್ಟಿತು, ಈ ರೀತಿ ಬರೆಯಬಾರದು. ಮಾಯಾಜೀತ್ ಆಗಿರುವಿರಿ. ನಾವು ಆಗದಿದ್ದರೆ ಮತ್ತೆ ಯಾರು ಆಗುವವರು, ಈ ಆತ್ಮಿಕ ನಶೆಯನ್ನು ಮಾಡಿಕೊಳ್ಳಿ. ಬೇರೆ ಬೇರೆ ಕಾರ್ಯಗಳಲ್ಲಿ ಮನಸ್ಸು ಹಾಗೂ ಬುದ್ಧಿ ವ್ಯಸ್ತವಾಗಿ ಬಿಡುತ್ತದೆ ಎಂದರೆ ನಶೆ ಮರ್ಜ್ ಆಗಿ ಹೋಗುತ್ತದೆ. ಆದರೆ ಮಧ್ಯ ಮಧ್ಯದಲ್ಲಿ ಚೆಕ್ ಮಾಡಿಕೊಳ್ಳಿ- ಕರ್ಮ ಮಾಡುತ್ತಲೂ ಸಹ ಈ ವಿಜಯೀತನದ ಆತ್ಮಿಕ ನಶೆ ಇದೆಯೇ? ..ನಿಶ್ಚಯವಿದ್ದರೆ ನಶೆ ಅವಶ್ಯವಾಗಿ ಇರುತ್ತದೆ. ನಿಶ್ಚಯದ ಚಿನ್ಹೆ ನಶೆ ಆಗಿದೆ ಹಾಗೂ ನಶೆ ಇದ್ದಲ್ಲಿ ಅವಶ್ಯವಾಗಿ ನಿಶ್ಚಯವಿರುತ್ತದೆ. ಎರಡರದ್ದು ಸಂಬಂಧವಿದೆ. ಆದ್ದರಿಂದ ಈಗ 99 ರಲ್ಲಿ ತಮ್ಮ ನಶೆಯನ್ನು ಸದಾ ಇಮರ್ಜ್ ಆಗಿ ಇಟ್ಟುಕೊಳ್ಳಿ,

ಆಗ ಅನುಭವವಾಗುವುದು. ತಪ್ಪು ಆಗುವುದಿಲ್ಲ, ಪರಿಶ್ರಮವು ಎನಿಸುವುದಿಲ್ಲ. ಬಾಪ್ದಾದಾರವರು ಮೊದಲು ಸಹ ಹೇಳಿದ್ದರು- ಯಾವಾಗ ಬಾಪ್ದಾದಾರವರು ಮಕ್ಕಳು ಪರಿಶ್ರಮ ಪಡುತ್ತಿರುವುದನ್ನು ನೋಡುತ್ತಾರೆ, ಯುದ್ಧ ಮಾಡುತ್ತಿರುವುದನ್ನು ನೋಡುತ್ತಾರೆ, ಆಗ ಮಕ್ಕಳು ಪರಿಶ್ರಮ ಪಡುತ್ತಿರುವುದು ತಂದೆಗೆ ಇಷ್ಟವಾಗುವುದಿಲ್ಲ ಆದ್ದರಿಂದ ಈ ನವ ವರ್ಷವನ್ನು ಹೇಗೆ ಆಚರಿಸುವಿರಿ? ಮುಕ್ತಿ ವರ್ಷವನ್ನಾಗಿ ಆಚರಿಸಬೇಕು. ನಕಾರಾತ್ಮಕತೆಯನ್ನು, ವ್ಯರ್ಥವನ್ನು ಸಮಾಪ್ತಿ ಮಾಡಿ ಆಗ ಈ ವರ್ಷ ಸ್ವತಹವಾಗಿ ಪರಿಶ್ರಮ ಮುಕ್ತ ವರ್ಷ ಆಗಿ ಬಿಡುವುದು. ಎಲ್ಲರೂ ಮೋಜಿನಲ್ಲಿ ಇರುವವರು, ಪರಿಶ್ರಮ ಪಡುವವರಲ್ಲ. ಮೋಜು ಚೆನ್ನಾಗಿ ಎನಿಸುತ್ತದೆಯೇ ಅಥವಾ ಪರಿಶ್ರಮ ಚೆನ್ನಾಗಿ ಎನಿಸುತ್ತದೆ? ಮೋಜು ಇಷ್ಟವಾಗುತ್ತದೆ ಅಲ್ಲವೇ? ಅಂದ ಮೇಲೆ ಈ ವರ್ಷ ಮನಸ್ಸಿನಲ್ಲಿ, ಸಂಕಲ್ಪದಲ್ಲಿಯೂ ಸಹ ಪರಿಶ್ರಮ ಮುಕ್ತರಾಗಿರಿ.

ಬಾಪ್ದಾದಾರವರ ಬಳಿ ಮಕ್ಕಳ ಪತ್ರಗಳು ಹಾಗೂ ಚೀಟಿಗಳು ಬಹಳಷ್ಟು ಒಳ್ಳೆಯ ಸಾಹಸ ತುಂಬಿರುವಂತಹದ್ದು ಬಂದಿವೆ- ನಾವು ಈಗಿನಿಂದ 108ರ ಮಾಲೆಯಲ್ಲಿ ಅವಶ್ಯವಾಗಿ ಬರುತ್ತೇವೆ, ಬಹಳಷ್ಟು ಮಕ್ಕಳ ಒಳ್ಳೊಳ್ಳೆಯ ಉಮಂಗದ ಪತ್ರಗಳು ಸಹ ಬಂದಿವೆ ಹಾಗೂ ಆತ್ಮಿಕ ವಾರ್ತಾಲಾಪದಲ್ಲಿಯೂ ಸಹ ಬಹಳ ಜನ ಬಾಪ್ದಾದಾರವರಿಗೆ ತಮ್ಮ ನಿಶ್ಚಯ ಹಾಗೂ ಸಾಹಸದ ಒಳ್ಳೆಯ ಸಮಾಚಾರವನ್ನು ಕೊಟ್ಟಿದ್ದಾರೆ. ಬಾಪ್ದಾದಾರವರು ಇಂತಹ ಮಕ್ಕಳಿಗೆ ಹೇಳುತ್ತಾರೆ- ಬಾಪ್ದಾದಾರವರು ನಿಮ್ಮೆಲ್ಲರ ಕಳೆದು ಹೋದದ್ದಕ್ಕೆ( ಭೂತಕಾಲಕ್ಕೆ) ಬಿಂದುವನ್ನು ಇಟ್ಟಿದ್ದಾರೆ. ಆದ್ದರಿಂದ ಕಳೆದು ಹೋದದ್ದನ್ನು ಯೋಚಿಸಬೇಡಿ, ಈಗ ಯಾವ ಸಾಹಸವನ್ನು ಇಟ್ಟಿದ್ದೀರಿ, ಸಾಹಸ ಹಾಗೂ ಸಹಯೋಗದಿಂದ ಮುಂದುವರೆಯುತ್ತಾ ಹೋಗಿ. ನವ ವರ್ಷದ ಹೊಸ ಉಮ್ಮಂಗವು ಸಹ ಬಹಳ ಚೆನ್ನಾಗಿ ಬರೆದಿದ್ದೀರಿ ವಿದೇಶದ ಮಕ್ಕಳಾಗಿರಲಿ, ದೇಶದ ಮಕ್ಕಳಾಗಿರಲಿ, ಬಾಪ್ದಾದಾರವರು ಇಂತಹ ಮಕ್ಕಳಿಗೆ ಇದೇ ವರದಾನವನ್ನು ಕೊಡುತ್ತಾರೆ- ಇದೇ ಸಾಹಸದಲ್ಲಿ, ನಿಶ್ಚಯದಲ್ಲಿ, ನಶೆಯಲ್ಲಿ ಅಮರ ಭವ. ಅಮರರಾಗಿರುತ್ತೀರಿ ಅಲ್ಲವೇ! ಡಬಲ್ ವಿದೇಶಿಯವರು ಅಮರರಾಗಿರುತ್ತೀರಾ? ಭಾರತವಾಸಿಯವರು ಇರುತ್ತೀರಲ್ಲವೇ? ಭಾರತದವರಿಗಂತೂ ನಂಬರ್ ತೆಗೆದುಕೊಳ್ಳಲೇಬೇಕು.

ನವ ವರ್ಷವನ್ನು ಹೇಗೆ ಆಚರಿಸುತ್ತೀರಿ? ಒಂದಂತೂ ಉಡುಗೊರೆಯನ್ನು ಕೊಡುತ್ತೀರಿ ಹಾಗೂ ಶುಭಾಶಯಗಳನ್ನು ಕೊಡುತ್ತಾರೆ. ಬಹಳಷ್ಟು ಸಿಹಿ ತಿನ್ನಿಸುತ್ತಾರೆ. ಬಹಳ ಹಾಡುತ್ತಾರೆ ಕುಣಿಯುತ್ತಾರೆ. ಹಾಗಾದರೆ ನೀವು ಕೇವಲ 12ರ ನಂತರ ಕೇವಲ ಒಂದು ದಿನ ಹೊಸ ವರ್ಷ ಆಚರಿಸುವುದಲ್ಲ ಆದರೆ ಬ್ರಾಹ್ಮಣ ಮಕ್ಕಳಿಗಾಗಿ ಈ ನವಯುಗದಲ್ಲಿ ಪ್ರತಿ ಗಳಿಗೆ ಹೊಸದಾಗಿದೆ, ಪ್ರತಿಯೊಂದು ಶ್ವಾಸ ಹೊಸದಾಗಿದೆ, ಪ್ರತಿಯೊಂದು ಸಂಕಲ್ಪ ಹೊಸದಾಗಿದೆ, ಆದ್ದರಿಂದ ಸದಾ ಇಡೀ ವರ್ಷ, ಒಂದು ದಿನವಲ್ಲ, ಒಂದು ವಾರವಲ್ಲ, ಒಂದು ತಿಂಗಳಲ್ಲ, ನಾಲ್ಕು ತಿಂಗಳು ಅಲ್ಲ, ಎಂಟು ತಿಂಗಳಲ್ಲ, 12 ತಿಂಗಳು ಸದಾ ಪರಸ್ಪರ ದಿಲ್ ಖುಷ್ ಮಿಠಾಯಿಯನ್ನು ಹಂಚುತ್ತಿರಿ. ಹಂಚುತಿರಲ್ಲವೇ? ದಿಲ್ ಖುಷ್ ಮಿಠಾಯಿಯನ್ನು ಹಚ್ಚಲು ಬರುತ್ತದೆಯೇ? ಎಲ್ಲರೂ ಬುದ್ಧಿವಂತರಾಗಿದ್ದಾರೆ. ಹಾಗಾದರೆ ದಿಲ್ ಖುಷ್ ಮಿಠಾಯಿಯನ್ನು ಹಂಚಿರಿ. ಯಾರು ಸಹ ನಿಮ್ಮ ದಿಲ್ ಖುಷ್ ಮಿಠಾಯಿಯನ್ನು ತನ್ನ ಸ್ವಭಾವದ ಕಾರಣ, ಸಂಸ್ಕಾರದ ಕಾರಣ, ಸಮಸ್ಯೆಯ ಕಾರಣ ಒಂದುವೇಳೆ ಸ್ವೀಕಾರ ಮಾಡದೆ ಇದ್ದರೆ ನೀವು ಹೃದಯವಿಧೀರ್ಣರಾಗಬೇಡಿ. ನೀವು ಹಂಚಿದ್ದಿರಿ, ನಿಮ್ಮ ಆಜ್ಞಾಕಾರಿ ಆಗುವ ಚಾರ್ಟ್ ಬಾಪ್ದಾದಾರವರ ಬಳಿ ಜಮಾ ಆಗಿ ಹೋಯಿತು. ಈ ರೀತಿ ಯೋಚಿಸಬೇಡಿ ನಾನಂತೂ ದಿಲ್ ಖುಷ್ ಮಿಠಾಯಿಯನ್ನು ತಿನ್ನಿಸಿದೆ ಆದರೆ ಇವರಂತೂ ಕೋಪ ಮಾಡಿಕೊಂಡರು, ಯಾವುದೇ ತೊಂದರೆ ಇಲ್ಲ, ಅವರು ರಹಸ್ಯವನ್ನು ತಿಳಿದುಕೊಂಡಿಲ್ಲ ಆದ್ದರಿಂದ ಕೋಪ ಮಾಡಿಕೊಂಡರು. ನೀವಂತೂ ರಹಸ್ಯವನ್ನು ತಿಳಿದುಕೊಂಡಿದ್ದೀರಿ ಅಲ್ಲವೇ! ಎಂದ ಮೇಲೆ ಈ ರಹಸ್ಯವನ್ನು ಸಹ ತಿಳಿದುಕೊಳ್ಳಿ- ಇವರು ಲೆಕ್ಕಾಚಾರ ಹಾಗೂ ಸಮಸ್ಯೆಯ ವಶರಾಗಿದ್ದಾರೆ. ನೀವು ಆಜ್ಞಾಕಾರಿಯಾಗಿ. ಸರಿಯೇ? ಆಜ್ಞಾಕಾರಿಯಾಗಬೇಕು, ಇದಕ್ಕಂತು ಎಲ್ಲರೂ ಚೆನ್ನಾಗಿ ಸರಿ ಎಂದು ಹೇಳುತ್ತೀರಿ, ಒಂದು ವೇಳೆ ನೀವು ಇಲ್ಲಿ ನೋಡಿದರೆ, ಕೈಯನ್ನು ಸಹ ಚೆನ್ನಾಗಿ ಅಲುಗಾಡಿಸುತ್ತೀರಿ, ಖುಷಿ ಪಡಿಸುತ್ತೀರಿ, ಕುತ್ತಿಗೆಯನ್ನು ಅಲುಗಾಡಿಸುತ್ತೀರಿ, ಕೈಯನ್ನು ಅಲುಗಾಡಿಸುತ್ತೀರಿ. ಆದರೆ ಬಾಪ್ದಾದಾರವರು ಆದರೂ ಸಹ ಪ್ರತಿಯೊಂದು ಮಗುವಿನ ಮೇಲೆ ಸದಾ ಖುಷಿಯಾಗಿರುತ್ತಾರೆ. ಯಾವಾಗ ನನ್ನ ಮಗು ಎಂದು ಹೇಳಿಬಿಟ್ಟರು, ಎಂದ ಮೇಲೆ ಯಾರೇ ಆಗಿರಲಿ, ಹೇಗೆ ಇರಲಿ, ತಂದೆಯಂತು ನೋಡಿ ಖುಷಿಯನ್ನೇ ಪಡುತ್ತಾರೆ. ಬಾಬಾರವರು ಯಾವ ಪ್ರತಿಜ್ಞೆಯನ್ನು ಮಾಡಿದ್ದಾರೆ- ಹೇಗಾದರೂ ಯೋಗ್ಯರನ್ನಾಗಿ ಮಾಡಿ ಜೊತೆಯಲ್ಲಿ ಕರೆದುಕೊಂಡು ಹೋಗಲೇಬೇಕು. ಜೊತೆಯಲ್ಲಿ ನಡೆಯಬೇಕಲ್ಲವೇ? ಜೊತೆಯಲ್ಲಿ ಹೋಗುವುದಕ್ಕಾಗಿ ತಯಾರಾಗಿದ್ದೀರಾ? ಎಲ್ಲರೂ ತಯಾರಾಗಿದ್ದೀರಾ? ಎವೆರ್ರೆಡಿ (ಸದಾ ತಯಾರು) ಆಗಿದ್ದೀರಾ? ಒಳ್ಳೆಯದು, ಎವೆರೆಡಿ ಆಗಿದ್ದೀರಿ, ಬಹಳ ಒಳ್ಳೆಯದು. ಎವರ್ ಹ್ಯಾಪಿ (ಸದಾ ಹರ್ಷಿತ) ಸಹ ಆಗಿದ್ದೀರಾ? ಯಾವಾಗ ಮಾಯೆ ಬಂದು ಬಿಡುತ್ತೆ ಆಗ? ಆಗ ಸ್ವಲ್ಪ ಸ್ವಲ್ಪ ಮನಸ್ಸಿನಲ್ಲಿ ಕಿರುಚಾಡುತ್ತೀರಾ? ಬಾಬಾ ಮಾಯೆ ಬಂದುಬಿಟ್ಟಿತ್ತು, ಬಂದು ಬಿಟ್ಟಿತು. ಕಿರುಚಾಡಬಾರದು, ತಮ್ಮನ್ನು ಹಾರಿಸಬೇಕು. ಮಾಯೆ ಕೆಳಗಡೆಯೇ ಉಳಿದುಕೊಂಡು ಬಿಡಬೇಕು, ನೀವು ಮೇಲೆ ಹಾರಿ ಹೋಗಬೇಕು ಆಗ ಮಾಯೆ ನೋಡುತ್ತಲೇ ಉಳಿದುಕೊಂಡು ಬಿಡುತ್ತದೆ. ಒಳ್ಳೆಯದು. ಖುಷಿಯಲ್ಲಿ ನೃತ್ಯ ಮಾಡುತ್ತಾ ಇರಿ ಹಾಗೂ ದಿಲ್ ಖುಷ್ ಮಿಠಾಯಿಯನ್ನು ಹಂಚುತ್ತಲು ಇರಿ. ಜೊತೆಯಲ್ಲಿ ಯಾರೇ ಸಂಬಂಧ -ಸಂಪರ್ಕದಲ್ಲಿ ಬಂದರೆ ಅವರಿಗೆ ಯಾವುದಾದರೂ ಒಂದು ಉಡುಗೊರೆಯನ್ನು ಕೊಡಿ, ಯಾರು ಸಹ ಖಾಲಿ ಕೈಯಲ್ಲಿ ಹೋಗದಿರಲಿ, ಯಾವ ಉಡುಗೊರೆಯನ್ನು ಕೊಡುವಿರಿ? ನಿಮ್ಮ ಬಳಿ ಉಡುಗೊರೆಗಳಂತೂ ಬಹಳ ಇದೆ. ಉಡುಗೊರೆಗಳ ಸ್ಟಾಕ್ ( ಜಮಾ) ಇದೆಯೇ? ಎಂದ ಮೇಲೆ

ಕೊಡುವುದರಲ್ಲಿ ಗೊಂದಲದಲ್ಲಿ ಬರಬೇಡಿ, ಕೊಡುತ್ತಾ ಹೋಗಿ. ಉದಾರ ಹೃದಯದವರಾಗಿ, ಕೆಲವರಿಗೆ ಶಕ್ತಿಯ ಸಹಾಯ ಕೊಡಿ, ಶಕ್ತಿಯ ಪ್ರಕಂಪನಗಳನ್ನು ಕೊಡಿ, ಕೆಲವರಿಗೆ ಯಾವುದೇ ಗುಣಗಳ ಉಡುಗೊರೆ ಕೊಡಿ. ಮುಖದಿಂದ ಅಲ್ಲ ಆದರೆ ತಮ್ಮ ಚಹರೆ ಹಾಗೂ ಚಲನೆಯಿಂದ ಕೊಡಿ. ಒಂದು ವೇಳೆ ಯಾವುದೇ ಗುಣ ಅಥವಾ ಶಕ್ತಿ ಇಲ್ಲದೆ ಇದ್ದರೂ ಸಹ ಕನಿಷ್ಟ ಪಕ್ಷ ಚಿಕ್ಕದೊಂದು ಉಡುಗೊರೆಯನ್ನು ಕೊಡಿ, ಅದು ಯಾವುದಾಗಿದೆ? ಶುಭ ಭಾವನೆ ಹಾಗೂ ಶುಭಕಾಮನೆಯ ಉಡುಗೊರೆ. ಶುಭಕಾಮನೆಯನ್ನು ಮಾಡಿ- ಇವರು ನನ್ನ ಅಗಲಿ ಹೋಗಿ ಮರಳಿ ಸಿಕ್ಕಿರುವ ಸಹೋದರ ಅಥವಾ ಸಹೋದರಿಯಾಗಿದ್ದಾರೆ, ಅಗಲಿ ಹೋಗಿ ಮರಳಿ ಸಿಕ್ಕಿದ್ದಾರೆ ಎಂದು ಯೋಚಿಸಿದರೆ ಅಶುಭ ಭಾವನೆಯಿಂದ ಶುಭ ಭಾವನೆ ಬಂದುಬಿಡುತ್ತದೆ. ಈ ಸಹೋದರ ಸಹೋದರಿಯದ್ದು ಸಹ ಹಾರುವ ಕಲೆಯ ಪಾತ್ರವಾಗಿ ಬಿಡಲಿ, ಇದಕ್ಕಾಗಿ ಸಹಯೋಗ ಹಾಗೂ ಶುಭ ಭಾವನೆ ಇದೆ. ಕೆಲವು ಮಕ್ಕಳು ಹೇಳುತ್ತಾರೆ- ನಾವು ಕೊಡುವುದು ತೆಗೆದುಕೊಳ್ಳುವುದು ಮಾಡುವುದಿಲ್ಲ. ಒಳ್ಳೆಯದು ಶುಭ ಭಾವನೆಯನ್ನು ತೆಗೆದುಕೊಳ್ಳುವುದಿಲ್ಲ, ಏನನ್ನಾದರೂ ಕೊಡುತ್ತೀರಿ ಅಲ್ಲವೇ. ಭಲೇ ಅಶುಭ ಮಾತನ್ನೇ ನಿಮಗೆ ಕೊಡುತ್ತಾರೆ, ಅಶುಭ ಪ್ರಕಂಪನಗಳನ್ನು ಕೊಡುತ್ತಾರೆ, ಅಶುಭ ಚಲನೆ ನಡೆಯುತ್ತಾರೆ ಎಂದರೆ ನೀವು ಯಾರಾಗಿದ್ದೀರಿ? ನಿಮ್ಮ ಆಕ್ಯುಪೇಶನ್(ಉದ್ಯೋಗ) ಏನಾಗಿದೆ? ವಿಶ್ವ ಪರಿವರ್ತಕರಾಗಿದ್ದೀರಾ? ನಿಮ್ಮ ಕೆಲಸ ಏನಾಗಿದೆ? ವಿಶ್ವ ಪರಿವರ್ತಕ ಆಗಿದ್ದೀರಲ್ಲವೇ! ಹಾಗಾದರೆ ವಿಶ್ವವನ್ನು ಪರಿವರ್ತನೆ ಮಾಡುವಿರಿ ಹಾಗೂ ಒಂದುವೇಳೆ ಅವರು ನಿಮಗೆ ಉಲ್ಟಾ ಮಾತುಗಳನ್ನು ಆಡಿದರು, ಉಲ್ಟಾ ಚಲನೆಯನ್ನು ನಡೆದರು ಎಂದರೆ ಅದನ್ನು ಪರಿವರ್ತನೆ ಮಾಡಲು ಸಾಧ್ಯವಿಲ್ಲವೇ? ಸಕಾರಾತ್ಮಕ ರೂಪದಲ್ಲಿ ಪರಿವರ್ತನೆ ಮಾಡಲು ಸಾಧ್ಯವಿಲ್ಲವೇ? ನಕಾರಾತ್ಮಕತೆಯನ್ನು ನಕಾರಾತ್ಮಕತೆಯಾಗಿ ಧಾರಣೆ ಮಾಡುವಿರೇ ಅಥವಾ ನಕಾರಾತ್ಮಕತೆಯನ್ನು ಸಕಾರಾತ್ಮಕತೆಯಲ್ಲಿ ಪರಿವರ್ತನೆ ಮಾಡಿ ನೀವು ಪ್ರತಿಯೊಬ್ಬರಿಗೂ ಶುಭ ಭಾವನೆ, ಶುಭಕಾಮನೆಯ ಉಡುಗೊರೆಯನ್ನು ಕೊಡುತ್ತೀರಿ. ಶುಭ ಭಾವನೆಯ ಸ್ಟಾಕ್ ಸದಾ ಜಮಾ ಮಾಡಿ ಇಟ್ಟುಕೊಳ್ಳಿ. ನೀವು ಕೊಡುತ್ತಾ ಇರಿ. ಪರಿವರ್ತನೆ ಮಾಡಿಕೊಳ್ಳಿ. ಆಗ ನಿಮ್ಮ ಟೈಟಲ್ ವಿಶ್ವ ಪರಿವರ್ತಕ ಅದು ಪ್ರಾಕ್ಟಿಕಲ್ನಲ್ಲಿ ಬಳಕೆಯಾಗುತ್ತಾ ಹೋಗುತ್ತದೆ. ಹಾಗೂ ಈ ಮಾತನ್ನು ಸರಿಯಾಗಿ ತಿಳಿದುಕೊಳ್ಳಿ- ಯಾರು ಸದಾ ಪ್ರತಿಯೊಬ್ಬರನ್ನು ಪರಿವರ್ತನೆ ಮಾಡಿ ತನ್ನ ವಿಶ್ವ ಪರಿವರ್ತನೆಯ ಕಾರ್ಯವನ್ನು ಸಾಕರದಲ್ಲಿ ತರುತ್ತಾರೆ, ಅವರೇ ಸಾಕಾರ ರೂಪದಲ್ಲಿ 21 ಜನ್ಮಗಳಿಗಾಗಿ ನಿಶ್ಚಿತವಾದ ರಾಜ್ಯ ಅಧಿಕಾರಿಯಾಗುತ್ತಾರೆ. ಸಿಂಹಾಸನದ ಮೇಲೆ ಭಲೆ ಒಂದೇ ಬಾರಿ ಕುಳಿತುಕೊಳ್ಳುತ್ತಾರೆ ಆದರೆ ಪ್ರತಿಯೊಂದು ಜನ್ಮದಲ್ಲಿ ರಾಜ ಪರಿವಾರದಲ್ಲಿ, ರಾಜ್ಯ ಅಧಿಕಾರಿ ಆತ್ಮಗಳ ಸಮೀಪ ಸಂಬಂಧದಲ್ಲಿ ಇರುತ್ತಾರೆ. ಎಂದ ಮೇಲೆ ವಿಶ್ವ ಪರಿವರ್ತಕರೇ ವಿಶ್ವ ರಾಜ್ಯ ಅಧಿಕಾರಿ ಆಗುತ್ತಾರೆ ಆದ್ದರಿಂದ ಸದಾ ತಮ್ಮ ಈ ಆಕ್ಯುಪೇಶನ್( ಉದ್ಯೋಗ) ವನ್ನು ನೆನಪಿಟ್ಟುಕೊಳ್ಳಿ- ನನ್ನ ಕರ್ತವ್ಯವೇ ಆಗಿದೆ ಪರಿವರ್ತನೆ ಮಾಡುವುದು. ದಾತನ ಮಕ್ಕಳಾಗಿದ್ದೀರಿ ಎಂದ ಮೇಲೆ ದಾತಾ ಆಗಿ ಕೊಡುತ್ತಾ ಹೋಗಿ, ಆಗಲೇ ಭವಿಷ್ಯದಲ್ಲಿ ಕೈಯಿಂದ ಯಾರಿಗೂ ಕೊಡುವುದಿಲ್ಲ ಆದರೆ ಸದಾ ನಿಮ್ಮ ರಾಜ್ಯದಲ್ಲಿ ಪ್ರತಿ ಆತ್ಮ ಸಂಪನ್ನವಾಗಿರುತ್ತದೆ, ಇದು ಈ ಸಮಯದಲ್ಲಿ ದಾತಾ ಆಗಿರುವ ಪ್ರಾಲಬ್ಧವಾಗಿದೆ. ಆದ್ದರಿಂದ ಲೆಕ್ಕ ಮಾಡಬೇಡಿ, ಇವರು ಇದನ್ನು ಮಾಡಿದರು, ಇಷ್ಟು ಬಾರಿ ಮಾಡಿದರು, ಮಾಸ್ಟರ್ ದಾತಾ ಆಗಿ ಉಡುಗೊರೆ ಕೊಡುತ್ತಾ ಹೋಗಿ. ಹಾಗೂ ಯಾವ ಶುಭಾಶಯಗಳು ಕೊಡುವಿರಿ? ನೋಡಿ ಯಾರಿಗಾದರೂ, ಯಾವುದೇ ಪ್ರಾಪ್ತಿ ಆಗುತ್ತದೆ ಎಂದರೆ ಅವರ ಮುಖದಿಂದ, ಮನಸ್ಸಿನಿಂದ ಇದೇ ಶಬ್ದ ಬರುತ್ತದೆ- ನಿಮಗೆ ಶುಭಾಶಯಗಳು ಎಂದು, ಪರಸ್ಪರ ಖುಷಿಯನ್ನು ಹಂಚುತ್ತಾರೆ ಎಂದರೆ ಹೇಳುತ್ತಾರೆ- ಶುಭಾಶಯಗಳು. ಉತ್ಸವವನ್ನು ಆಚರಿಸುತ್ತಾರೆ ಎಂದರೆ ಹೇಳುತ್ತಾರೆ- ಶುಭಾಶಯಗಳು. ಈ ರೀತಿ ಯಾರೇ ನಿಮ್ಮ ಸಮ್ಮುಖದಲ್ಲಿ ಬರುತ್ತಾರೆಂದರೆ ಮುಖದಿಂದ ಇಂತಹ ಶಬ್ದವನ್ನು ಹೇಳಿ, ಸಂಕಲ್ಪದಲ್ಲಿ ಇಂತಹ ಶ್ರೇಷ್ಠ ಸಂಕಲ್ಪವಿರಲಿ ಆಗ ಯಾರೇ ನಿಮ್ಮೊಂದಿಗೆ ಭೇಟಿಯಾಗುತ್ತಾರೆ ಅವರು ಪ್ರತಿ ಸಮಯ ಹೃದಯದಿಂದ ಶುಭಾಶಯಗಳು ಹಾಗೂ ಆಶೀರ್ವಾದವನ್ನು ಅವಶ್ಯವಾಗಿ ಕೊಡುವರು. ಹಾಗಾದರೆ ಸದಾ ಇಂತಹ ಮಾತನ್ನು ಆಡಿ, ಇಂತಹ ಸಂಬಂಧ ಸಂಪರ್ಕದಲ್ಲಿ ಬನ್ನಿ ಅವರ ಹೃದಯದಿಂದ, ಮುಖದಿಂದ ಶುಭಾಶಯಗಳು ಹೊರಬರಲಿ ಹಾಗೂ ಆಶೀರ್ವಾದಗಳೇ ಹೊರಬರಲಿ. ಶುಭಾಶಯಗಳ ಯೋಗ್ಯವಿಲ್ಲದಂತಹ ಶಬ್ದಗಳು ಹೊರ ಬರದಿರಲಿ. ಒಂದೊಂದು ಮಾತು ರತ್ನದಂತೆ ಇರಲಿ. ಸಾಧಾರಣ ಮಾತುಗಳಾಗದಿರಲಿ. ಬಾಪ್ದಾದಾರವರು ಇಲ್ಲಿಯವರೆಗೂ ಫಲಿತಾಂಶದಲ್ಲಿ ನೋಡಿದರು, ನಾಳೆಯಂತೂ ಬದಲಾಗುತ್ತದೆ ಆದರೆ ಇಲ್ಲಿಯವರೆಗೂ ನೋಡಿದರು ಮಾತಿನಲ್ಲಿ ಯಾವ ಸಂಯಮ ಹಾಗೂ ಸ್ನೇಹವಿರಬೇಕು ಆ ಸ್ನೇಹವೂ ಸಹ ಕಡಿಮೆಯಾಗಿ ಬಿಡುತ್ತದೆ ಹಾಗೂ ಸಂಯಮವು ಸಹ ಕಡಿಮೆಯಾಗುತ್ತದೆ. ಆದ್ದರಿಂದ ಇಂತಹ ಮಾತುಗಳನ್ನು ಆಡಿ ಯಾವುದು ರತ್ನವಾಗಿದೆ. ನೀವು ವಜ್ರ ಸಮಾನರಾಗಿದ್ದೀರಿ ಎಂದ ಮೇಲೆ ನಿಮ್ಮ ಮಾತುಗಳು ಸಹ ರತ್ನ ಸಮಾನವಾಗಿರಲಿ. ಈ ರೀತಿ ಮೌಲ್ಯವಂತವಾಗಿರಲಿ. ಸಾಧಾರಣವಾಗಿ ಇರದಿರಲಿ. ಸಾಧಾರಣವೂ ಇರಬಾರದು, ವ್ಯರ್ಥವೂ ಇರಬಾರದು. ಕೆಲವೊಮ್ಮೆ ಬಾಪ್ದಾದಾರವರು ನೋಡಿದ್ದಾರೆ, ಫಲಿತಾಂಶವನ್ನು ಹೇಳಲೇ, ಏಕೆಂದರೆ 12 ಗಂಟೆಯ ನಂತರ ಎಲ್ಲವನ್ನೂ ಸಮಾಪ್ತಿ ಮಾಡಬೇಕಲ್ಲವೇ! ಬಾಪ್ದಾದಾರವರು ಇದನ್ನು ಸಹ ನೋಡಿದರು- ಕೆಲವು ಮಕ್ಕಳು ಚಿಕ್ಕ ಮಾತಿನ ವಿಸ್ತಾರವನ್ನು ಬಹಳ ಮಾಡುತ್ತಾರೆ. ಇದರಲ್ಲಿ ಏನಾಗುತ್ತದೆ ಎಂದರೆ, ಯಾವುದನ್ನು ಜಾಸ್ತಿ ಹೇಳುತ್ತಾರೆ ಎಂದರೆ ಹೇಗೆ ವೃಕ್ಷದ ವಿಸ್ತಾರವಾಗುತ್ತದೆ ಅದರ ಬೀಜ ಅಡಗಿ ಹೋಗುತ್ತದೆ, ಅವರು ತಿಳಿಯುತ್ತಾರೆ ನಾವು ತಿಳಿಸುವುದಕ್ಕಾಗಿ ವಿಸ್ತಾರ ಮಾಡುತ್ತಿದ್ದೇವೆ, ಆದರೆ ವಿಸ್ತಾರದಲ್ಲಿ ಯಾವ ಮಾತನ್ನು ನೀವು ತಿಳಿಸಲು ಬಯಸುತ್ತಿದ್ದೀರಿ ಅದರ ಸಾರ ಅಡಗಿ ಹೋಗುತ್ತದೆ ಹಾಗೂ ಮಾತು, ವಾಣಿಯ ಶಕ್ತಿಯು ಇರುತ್ತದೆ. ವ್ಯರ್ಥ ಮಾತು ಇರುತ್ತದೆ ಎಂದರೆ ವಾಣಿಯ ಶಕ್ತಿಯು ಕಡಿಮೆಯಾಗಿ ಬಿಡುತ್ತದೆ. ಜಾಸ್ತಿ ಮಾತನಾಡುವವರ ಬುದ್ಧಿಯ ಶಕ್ತಿಯು ಸಹ ಕಡಿಮೆಯಾಗಿ ಹೋಗುತ್ತದೆ. ಶಾರ್ಟ್ ಹಾಗೂ ಸ್ವೀಟ್ (ಚಿಕ್ಕದಾಗಿ ಹಾಗೂ ಮಧುರವಾಗಿ) ಈ ಎರಡು ಶಬ್ದವನ್ನು ನೆನಪಿಟ್ಟುಕೊಳ್ಳಿ.

ಬೇರೆ ಯಾರಾದರೂ ಹೇಳುತ್ತಾರೆ ಎಂದರೆ ಅವರಿಗೆ ಹೇಳುತ್ತೀರಿ ನಮಗೆ ಇಷ್ಟೊಂದು ಕೇಳಲು ಸಮಯವಿಲ್ಲ. ಆದರೆ ಯಾವಾಗ ನೀವು ಸ್ವಯಂ ಹೇಳುತ್ತೀರಿ ಎಂದರೆ ಸಮಯವನ್ನು ಮರೆತು ಹೋಗುತ್ತೀರಿ. ಆದ್ದರಿಂದ ನಿಮ್ಮ ಖಜಾನೆಯ ಸ್ಟಾಕ್ ಅನ್ನು ಜಮಾ ಮಾಡಿಕೊಳ್ಳಿ. ಸಂಕಲ್ಪದ ಖಜಾನೆಯನ್ನು ಜಮಾ ಮಾಡಿಕೊಳ್ಳಿ, ಮಾತಿನ ಖಜಾನೆಯನ್ನು ಜಮಾ ಮಾಡಿಕೊಳ್ಳಿ, ಶಕ್ತಿಗಳ ಖಜಾನೆಯನ್ನು ಜಮಾ ಮಾಡಿಕೊಳ್ಳಿ, ಸಮಯದ ಖಜಾನೆಯನ್ನು ಜಮಾ ಮಾಡಿಕೊಳ್ಳಿ, ಗುಣಗಳ ಖಜಾನೆಯನ್ನು ಜಮಾ ಮಾಡಿಕೊಳ್ಳಿ. ಪ್ರತಿದಿನ ರಾತ್ರಿ ತಮ್ಮ ಈ ಖಜಾನೆಗಳ ಉಳಿತಾಯದ ಲೆಕ್ಕಪತ್ರವನ್ನು ಪರಿಶೀಲಿಸಿಕೊಳ್ಳಿ. ಎಷ್ಟು ಸಂಕಲ್ಪ ವ್ಯರ್ಥದ ಬದಲಾಗಿ ಬೆಸ್ಟ್ ನ (ಸಮರ್ಥದ) ಖಾತೆಯಲ್ಲಿ ಜಮಾ ಮಾಡಿದೆ? ಎಷ್ಟು ಸಮಯ ಸಮರ್ಥದ ಖಾತೆಯಲ್ಲಿ ಜಮಾ ಮಾಡಿದೆ? ಗುಣ ಹಾಗೂ ಶಕ್ತಿಗಳಿಂದ ಶ್ರೇಷ್ಠ ಕಾರ್ಯವನ್ನು ಮಾಡಿದೆ? ಗುಣವನ್ನು ಕಾರ್ಯದಲ್ಲಿ ತೊಡಗಿಸಿದೆ? ಶಕ್ತಿಗಳನ್ನು ಕಾರ್ಯದಲ್ಲಿ ತೊಡಗಿಸಿದೆ? ಇದಾಗಿದೆ ಜಮಾ ಮಾಡುವುದು. ಹಾಗಾದರೆ ಎಲ್ಲಾ ಸಂಕಲ್ಪ, ಸಮಯ, ಗುಣ, ಶಕ್ತಿಗಳ ಲೆಕ್ಕಪತ್ರವನ್ನು ಪ್ರತಿದಿನ ರಾತ್ರಿ ಪರಿಶೀಲನೆ ಮಾಡಿ ಹಾಗೂ ಟೋಟಲ್ ಮಾಡಿ ಎಷ್ಟು ಉಳಿತಾಯದ ಖಾತೆ ಆಯಿತು? ಈ ಉಳಿತಾಯ ಸ್ವಯಂಗೂ ಸಹ ಸಹಯೋಗ ಕೊಡುತ್ತಾ ಇರುತ್ತದೆ ಹಾಗೂ ಅನ್ಯರಿಗೂ ಕೊಡುತ್ತದೆ. ತಿಳಿಯಿತೇ ಏನು ಮಾಡಬೇಕು ಎಂದು? ಎಲ್ಲರೂ ಕೇಳುತ್ತೀರಿ ಅಲ್ಲವೇ ಏನು ಮಾಡಬೇಕು? ಹಾಗಾದರೆ ಈಗ ಇದನ್ನು ಮಾಡಬೇಕು. ಗ್ರೀಟಿಂಗ್ಸ್(ಶುಭಾಶಯ)ಗಳನ್ನು ತೆಗೆದುಕೊಳ್ಳಬೇಕು, ಉಡುಗೊರೆಯನ್ನು ಕೊಡಬೇಕು, ಜಮಾ ಸಹ ಮಾಡಬೇಕು ಹಾಗೂ ಪರಿಶ್ರಮವನ್ನು ಬಿಡಬೇಕು. ಯಾವಾಗ ಉಳಿತಾಯದ ಮೇಲೆ ಗಮನವನ್ನು ಕೊಡುವಿರಿ ಆಗ ಪರಿಶ್ರಮ ಪಡುವ ಅವಶ್ಯಕತೆ ಇರುವುದಿಲ್ಲ. ಪರಿಶ್ರಮ ಮುಕ್ತ ವರ್ಷ ವಿಜೃಂಭಣೆಯಿಂದ ಆಚರಿಸಿ. ವ್ಯರ್ಥ ಹಾಗೂ ನಕಾರಾತ್ಮಕತೆಗಳ ಮುಕ್ತ ವರ್ಷ ಆಚರಿಸಿ. ಬಾಪ್ದಾದಾರವರು ಮುಕ್ತಿ ವರ್ಷದ ಫಲಿತಾಂಶವನ್ನು ಈಗಲೇ ಕೇಳುತ್ತಿಲ್ಲ, ಬಾಪ್ದಾದಾರವರಿಗೆ ನೆನಪಿದೆ. ಫಲಿತಾಂಶವನ್ನು ತೆಗೆದುಕೊಳ್ಳುವರು- ಎಷ್ಟು ಜನ ಮುಕ್ತಿ ವರ್ಷವನ್ನು ಆಚರಿಸಿದರು ಅಥವಾ ತಿಂಗಳುಗಳನ್ನು ಆಚರಿಸಿದರು? ಆರು ತಿಂಗಳು ಆಚರಿಸಿದರು, ಅರ್ಧ ಆಚರಿಸಿದರು, ಪೂರ್ಣ ಆಚರಿಸಿದರು- ಎಲ್ಲರ ಲೆಕ್ಕವನ್ನು ತೆಗೆದುಕೊಳ್ಳುತ್ತೇವೆ? ಒಳ್ಳೆಯದು.

ನಾಲ್ಕಾರು ಕಡೆಯ ಅತಿ ಸ್ನೇಹಿ ಸಮೀಪ ಬ್ರಾಹ್ಮಣ ಆತ್ಮಗಳಿಗೆ ನವಯುಗದ ರಚೈತಾರವರ ಶುಭಾಶಯಗಳು, ಶುಭಾಶಯಗಳು, ಶುಭಾಶಯಗಳು. ಇದು ಬೀಳ್ಕೊಡುಗೆಯ ಹಾಗೂ ಶುಭಾಶಯಗಳ ಸಮಯವಾಗಿದೆ. ಸಂಗಮವಾಗಿದೆ. ಹಳೆಯ ವರ್ಷಕ್ಕೆ ಬೀಳ್ಕೊಡುಗೆ, ಹಳೆಯ ವರ್ಷದ ಜೊತೆಗೆ ಹಳೆಯ ಮಾತುಗಳು, ಹಳೆಯ ಸಮಸ್ಯೆಗಳು, ಹಳೆಯ ಸಂಸ್ಕಾರ ಎಲ್ಲದಕ್ಕೂ ಬೀಳ್ಕೊಡುಗೆಗಳು ಹಾಗೂ ಹೊಸ ಉಮಂಗ- ಉತ್ಸಾಹ ಸಂಪನ್ನ ವರ್ಷಕ್ಕೆ ಅಭಿನಂದನೆಗಳು ಹಾಗೂ ಶುಭಾಶಯಗಳು. ಈ ವರ್ಷವನ್ನು ಸದಾ ಪರಿಶ್ರಮ ಮುಕ್ತ ವರ್ಷವನ್ನಾಗಿ ಆಚರಿಸಿ ಈ ವರ್ಷವನ್ನು ಸದಾ ಸ್ವ ಹಾಗೂ ಸರ್ವರ ನಿರ್ವಿಘ್ನ ಭವದ ವರದಾನದಿಂದ ಆಚರಿಸಿ. ಈ ವರ್ಷದಲ್ಲಿ ಪ್ರತಿಯೊಬ್ಬರಿಗೂ ಬಾಪ್ದಾದಾರವರು ಹಾಗೂ ದಾದಿಯರ ಮುಖಾಂತರ ನಂಬರ್ಒನ್ನಲ್ಲಿ ಹೋಗುವಂತಹ ಉಡುಗೊರೆ ಹಾಗೂ ಗಿಫ್ಟನ್ನು ತೆಗೆದುಕೊಳ್ಳಬೇಕು. ಇದಕ್ಕಾಗಿ ಎಲ್ಲಾ ವಿದೇಶದವರು ಹಾಗೂ ಭಾರತ ವಾಸಿಗಳಿಗೆ ನಂಬರ್ ಒನ್ ನಿಶ್ಚಯವನ್ನು ಇಟ್ಟುಕೊಂಡು ಮುಂದುವರೆಯಬೇಕು ಹಾಗೂ ಮುಂದುವರಿಸಬೇಕು. ಹಾಗಾದರೆ ಬಹಳ ಬಹಳ ನೆನಪು ಪ್ರೀತಿಯ ಸಹಿತ ಎಲ್ಲಾ ಪ್ರಕಾರದ, ಮನಸಾ, ವಾಚ ಎಲ್ಲಾ ರೂಪದಿಂದ ಪದಮ ಪದಮದಷ್ಟು ಶುಭಾಶಯಗಳನ್ನು ಕೊಡುತ್ತಿದ್ದಾರೆ. ಈಗ ಒಂದು ಸೆಕೆಂಡಿನಲ್ಲಿ ಶಕ್ತಿಶಾಲಿ ಸಂಕಲ್ಪದಿಂದ, ದೃಢತೆಯಿಂದ ಹಳೆಯ ವಸ್ತುಗಳಿಗೆ, ಹಳೆಯ ವರ್ಷಕ್ಕೆ ಹಳೆಯ ಮಾತುಗಳಿಗೆ ಸದಾ ಕಾಲಕ್ಕಾಗಿ ಬಿಳ್ಕೊಡುಗೆ ಕೊಡಿ. ಒಂದು ಕ್ಷಣ ಎಲ್ಲರೂ- ದೃಢತೆ ಸಫಲತೆಯಾಗಿದೆ, ಈ ದೃಢ ಸಂಕಲ್ಪದಲ್ಲಿ ಸ್ಥಿತರಾಗಿ ಬಿಡಿ. ಒಳ್ಳೆಯದು. ಓಂ ಶಾಂತಿ.

ವರದಾನ: ವರದಾನ: ಒತ್ತಡದಿಂದ ಚಿಂತಿತರಾಗಿರುವ ದುಃಖಿ ಆತ್ಮಗಳಿಗೆ ಧೈರ್ಯ ತುಂಬಿ ಮುಂದುವರೆಸುವಂತಹ ಮಾಸ್ಟರ್ ದಯಾಹೃದಯಿ ಭವ.

ವರ್ತಮಾನ ಸಮಯ ಬಹಳಷ್ಟು ಆತ್ಮಗಳು ಒಳಗಿನ ಒತ್ತಡದಿಂದ ದುಃಖಿ ಹಾಗೂ ಚಿಂತಿತರಾಗಿದ್ದಾರೆ, ಅಸಹಾಯಕರಾಗಿ ಮುಂದುವರೆಯಲು ಶಕ್ತಿಯಿಲ್ಲ. ನೀವು ಅವರಿಗೆ ಶಕ್ತಿ ಕೊಡಿ. ಹೇಗೆ ಕಾಲಿಲ್ಲದವರಿಗೆ ಮರದ ಕಾಲನ್ನು ಮಾಡಿ ಕೊಟ್ಟಾಗ ಅವರು ನಡೆಯಲು ಪ್ರಾರಂಭಿಸುತ್ತಾರೆ. ಅದೇ ರೀತಿ ನೀವು ಅವರಿಗೆ ಧೈರ್ಯದ ಕಾಲನ್ನು ಕೊಡಿ, ಏಕೆಂದರೆ ಬಾಪ್ದಾದಾ ನೋಡುತ್ತಾರೆ ಅಜ್ಞಾನಿ ಮಕ್ಕಳಲ್ಲಿ ಪರಿಸ್ಥಿತಿ ಏನಾಗಿದೆ, ಹೊರ ನೋಟಕ್ಕೆ ನೋಟ ಬಹಳ ಚೆನ್ನಾಗಿದೆ ಒಳ್ಳೆ ಟಿಪ್-ಟಾಪ್ ಆಗಿದ್ದಾರೆ. ಆದರೆ ಒಳಗೆ ಬಹಳ ದುಃಖಿಯಾಗಿದ್ದಾರೆ. ಆದ್ದರಿಂದ ಮಾಸ್ಟರ್ ದಯಾಹೃದಯಿಯಾಗಿ.

ಸ್ಲೋಗನ್: ಸ್ಲೋಗನ್: ನಿರ್ಮಾಣರಾಗಿ, ಕೋಮಲರಾಗಬೇಡಿ, ನಿರ್ಮಾಣತೆಯೇ ಮಹಾನತೆಯಾಗಿದೆ.

ಸೂಚನೆ: ಇಂದು ತಿಂಗಳಿನ ಮೂರನೇ ರವಿವಾರ ಅಂತರರಾಷ್ಟ್ರೀಯ ದಿನವಾಗಿದೆ. ಎಲ್ಲಾ ಬ್ರಹ್ಮಾ ವತ್ಸ ಸಂಘಟಿತ ರೂಪದಲ್ಲಿ ಸಾಯಂಕಾಲ 6.30ಯಿಂದ 7.30ರವರೆಗೆ ವಿಶೇಷ ತಮ್ಮ ಲೈಟ್ ಮೈಟ್ ಸ್ವರೂಪದಲ್ಲಿ ಸ್ಥಿತರಾಗಿ, ಜ್ಞಾನ ಸೂರ್ಯ ತಂದೆಯ ಕಿರಣಗಳ ಕೆಳಗಡೆ ಕುಳಿತುಕೊಂಡು ಶಾಂತಿಯ ಶಕ್ತಿ ಮತ್ತು ಪವಿತ್ರತೆಯ ಸಕಾಶ ಕೊಡುವುದರ ಸೇವೆಯನ್ನು ಮಾಡಿ.